ತೇಜಸ್ವಿ ನೆನಪಿನ ದೋಣಿಯಲ್ಲಿ- 2

ಪೂರ್ಣಚಂದ್ರ ತೇಜಸ್ವಿ ಕಥೆಗಳನ್ನು ಎಷ್ಟು ಸಲ ಬೇಕಾದರೂ ಓದಬಹುದು, ಬೋರಾಗೋದಿಲ್ಲ. ಹಾಗೆಯೇ ಅವರ ನೆನಪುಗಳು; ಮೊಗೆದಷ್ಟೂ ಮೇಲಕ್ಕೆ ಬರುತ್ತವೆ. ಮೂಡಿಗೆರೆಯಲ್ಲಿ ಅವರೊಂದಿಗೆ ಒಡನಾಡಿದ ಕೆಲವು ಅಪರೂಪದ ಪ್ರಕರಣಗಳು ಇಲ್ಲಿವೆ..



'ನೋಡು, ನಾವೀಗ ರಸ್ತೆ ಬದಿಯಲ್ಲಿ ಯಾರೋ ಎಂಬಂತೆ ಇರೋಣ, ಯಾರು ಗುರುತಿಸ್ತಾರೆ ನೋಡೋಣ. ನನಗೂ ಈ ಬಿಸಿಲಿಗೆ ಆಯಾಸ ಆಗಿದೆ. ವಿಶ್ರಾಂತಿ ತೆಗೆದುಕೊಳ್ಳೋಣ' ಎಂದವರೇ ರಸ್ತೆ ಬದಿಯ ನೆಡುತೋಪಿನ ಮರದ ನೆರಳಿನಲ್ಲಿ ರಸ್ತೆ ಪಕ್ಕದಲ್ಲಿಯೇ ತರಗೆಲೆಗಳ ಮೇಲೆ ಮಲಗಿಯೇಬಿಡೋದೆ!

# 'ಇನ್ನೊಂದ್ಸಲ ಹಿಂಗ್ ಮಾಡಿದ್ರೆ ಗ್ರಾಚಾರ ಬಿಡಿಸ್ತೀನಿ..'

ಛೇ, ಇಂತಹ ದೊಡ್ಡ ಮನುಷ್ಯ, ಹೀಗೆ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಬೇಕಾಬಿಟ್ಟಿ ಮಲಗುವುದೇ' ಎಂದು ನನಗೆ ಕೆಡುಕೆನಿಸಿತು.

■ **ಧನಂಜಯ ಜೀವಾಳ ಬಿ.ಕೆ.**



ತೇಜಸ್ವಿಯವರ ಬದುಕು ಬರಹದಿಂದ ಪ್ರಭಾವಿತನಾಗಿದ್ದ ನನ್ನಿಂದ ಆಗಾಗ್ಗೆ ಅವರನ್ನು ಭೇಟಿ ಮಾಡಿ ಅವರ ಕೆಲಸ ಕಾರ್ಯಗಳನ್ನು ಡಿಸ್ಟರ್ಬ್ ಮಾಡುವ ಅನೇಕ ಸಂದರ್ಭಗಳು ಘಟಿಸುತ್ತಲೇ ಇದ್ದವು. ಒಂದೊಮ್ಮೆ ಕಂಪ್ಯೂಟರ್‌ನಲ್ಲಿ ಅವರು ಸೃಷ್ಟಿಸುತ್ತಿದ್ದ ಫೋಟೋ ಇಮೇಲ್‌ಗಳು, ಅದನ್ನು ಉತ್ತಮಗೊಳಿಸುತ್ತಿದ್ದ ರೀತಿ ಮುಂತಾದವುಗಳನ್ನು ಗಮನಿಸುತ್ತಿದ್ದ ನಾನು ನನಗೂ ಹೇಳಿಕೊಡಬೇಕೆಂದು ಗಂಟುಬಿದ್ದೆ.

'ಅಲ್ಲಯ್ಯಾ.. ಸರ್ಕಾರಿ ನೌಕರಿ ಅಂತೀಯ, ಸಂಘ ಸಂಸ್ಥೆ ಅಂತೀಯ, ಇದು ಬೇರೆ ಮಾಡ್ತೀನಿ ಅಂತೀಯ. ಅದೇನು ಮಾಡ್ಬೇಕು ಅಂತ ಮೊದ್ಲು ನಿರ್ಧಾರ ಮಾಡು. ಕಂಡದ್ದೆಲ್ಲಾ ಮಾಡ್ತೀನಿ ಅಂದ್ರೆ ಅದೇನು ಪಾನಿಪುರಿ ತಿಂದಂಗೆ ಅಂದ್ಕಂಡಿದ್ದೀಯಾ?' ಎಂದು ಗದರಿಸಿದರು. 'ಏನಕ್ಕೂ ಮೊದ್ಲು ಒಂದು ಕಂಪ್ಯೂಟರ್ ತಗೋ ಆಮೇಲೆ ನೋಡ್ತೀನಿ' ಎಂದರು. ಅಷ್ಟೇ ಸಾಕು! ಒಂದು ವಾರದೊಳಗೆ ಕಂಪ್ಯೂಟರ್ ತಂದಾಯ್ತು. ಎಡಬಿಡದ ಕೆಲಸದ ತೇಜಸ್ವಿಯವರೇ ಅಗತ್ಯವಾದ ಪ್ರೋಗ್ರಾಂಗಳನ್ನು ಹಾಕಿಕೊಟ್ಟು ಕಂಪ್ಯೂಟರ್ ಆಪರೇಷನ್ ಇಲ್ಲಿ ಕಲಿತುಕೋ ಎಂದು ಬೇಸಿಕ್ ವಿಚಾರಗಳನ್ನು ತಿಳಿಸಿಕೊಟ್ಟರು.

'ಫೋಟೋಗ್ರಫಿ ಕೆಲಸವನ್ನು ಕಲಿಯಲು ಮನೆಗೇ ಬಾ. ನಾನೇನು ಮಾಡ್ತೀನಿ ಅದನ್ನು ಗಂಭೀರವಾಗಿ ನೋಡಿಕೋ. ಮುಂದೆ ನೋಡೋಣ' ಎಂದು ಕಲಿಕೆಯ ನನ್ನ ಆಸಕ್ತಿಗೆ ಪ್ರೋತ್ಸಾಹ ನೀಡಿದರು. ಫೈಲ್ ಓಪನಿಂಗ್, ನ್ಯೂ ಡಾಕ್ಯುಮೆಂಟ್ ಕ್ರಿಯೇಷನ್, ಕಾಂಟ್ರಾಸ್ಟ್, ಗ್ರೇಸ್ಕೇಲ್, ಬ್ಲರ್, ಥ್ರೆಷ್‌ಹೋಲ್ಡ್, ಕಲರ್ ಬ್ಯಾಲೆನ್ಸ್, ಕಟ್, ಪೇಸ್ಟ್, ಮರ್ಜ್– ಮುಂತಾದ ಫೋಟೋಗ್ರಫಿಗೆ ಸಂಬಂಧಿಸಿದ ಅಗಾಧ ಮಾಹಿತಿಯನ್ನು ಅತ್ಯಂತ ಸರಳವಾಗಿ ಈ ಕ್ಷಣವೂ ನೆನಪಿರುವಂತೆ ಹಂತಹಂತವಾಗಿ ಕರಾರುವಕ್ಕಾಗಿ ಹೇಳಿಕೊಟ್ಟ ಗುರುಗಳು ನಮ್ಮ ತೇಜಸ್ವಿ. ಇಷ್ಟಲ್ಲದೇ ನನ್ನ ಕಂಪ್ಯೂಟರ್ ಕೈಕೊಟ್ಟಾಗಲೆಲ್ಲಾ ಮೈನರ್ ರಿಪೇರಿಗಳನ್ನು ಬೇಸರಿಸದೆ ಮಾಡಿಕೊಟ್ಟಿರುವದರ ಜೊತೆಗೆ ದುರಸ್ತಿಯನ್ನು ನಿರ್ವಹಿಸುವ ಬಗ್ಗೆಯೂ ನನ್ನ ಕೈಯಿಂದಲೇ ಮಾಡಿಸುತ್ತಿದ್ದರು.

ಒಮ್ಮೆ ಫೋಟೋಗ್ರಫಿ ಕೆಲಸ ಮಾಡುವಾಗ ನನ್ನ ಕಂಪ್ಯೂಟರ್ ಸರಿಪಡಿಸಲಾಗದ ಸ್ಥಿತಿಯಲ್ಲಿ ಹಾಳಾಯಿತು. ತೇಜಸ್ವಿಯವರಿಗೆ ಫೋನ್ ಮಾಡಿದರೆ, 'ಈಗ ನನಗೆ ಪುರುಸೊತ್ತಿಲ್ಲ. ತರೋಕಾದ್ರೆ ಇಲ್ಲಿಗೇ ತಗೊಂಬಾ. ಕೀಬೋರ್ಡ್, ಡಾಟಾ ಕೇಬಲ್ ಸಮೇತ ತಗೊಂಬಾ. ಕೆಲವು ಕೀಬೋರ್ಡ್ ಸ್ಪೆಸಿಫಿಕ್ ಸಿಪಿಯುಗಳಿರುತ್ತವೆ. ಮತ್ತೆ ಹಿಂದೆ ಮುಂದೆ ತಿರುಗೋದಾಗುತ್ತೆ' ಎಂದರು.

ತಗೊಂಡೋದೆ. ತಾವು ಮಾಡುತ್ತಿದ್ದ ಕೆಲಸ ಅಲ್ಲಿಗೇ ನಿಲ್ಲಿಸಿ ನನ್ನಿಂದಲೇ ಸಿಪಿಯು ವನ್ನು ಬಿಚ್ಚಿಸಿ, ಪ್ರತಿ ಸಾಕೆಟ್ ಕನೆಕ್ಷನ್ ಅನ್ನು ಪರಿಶೀಲಿಸಿದರು. ಅವರಿಗೆ ತಿಳಿದಂತಹ ಎಲ್ಲಾ ಸಾಧ್ಯತೆಗಳನ್ನು ಪ್ರಯೋಗಿಸಿ ನೋಡಿದರು. 'ಏನ್ ಪ್ರಯತ್ನ ಮಾಡಿದ್ರೂ ಕೆಲ್ಸ ಮಾಡ್ತಿಲ್ವಲ್ಲಯ್ಯಾ. ಬೀಳಿಸಿ ಗೀಳಿಸಿದೆಯೇನೋ ಮಾರಾಯ?' ಎಂದರು.

'ಸರ್ ನೀವು ಬೈಯಲ್ಲಾ ಅಂದ್ರೆ ಹೇಳ್ತೀನಿ' ಅಂದೆ. ಹುಬ್ಬು ಗಂಟಿಕ್ಕಿ, ಕಳ್ಳನ್ನ ಹಿಡಿದ ಗತ್ತಿನಲ್ಲಿ 'ನನಗ್ಗೊತ್ತು.. ಏನೋ ತಲೆಹರಟೆ ಮಾಡಿರ್ತೀಯ, ಮೊನ್ನೆ ಮೊನ್ನೆ ಕಂಪ್ಯೂಟರ್ ನೋಡಿದೀಯ. ನೀನೇ ರಿಪೇರಿ ಮಾಡೋಕೋಗಿ ಹಾಳ್ಮಾಡ್ಕೊಂಡ್ ಈಗ ನನ್ ತಲೆಗೆ ತಿಂತಿದೀಯಾ? ಏನ್ ಮಾಡಿದೀಯ ಹೇಳು?'

'ಪದೇ ಪದೇ ಹ್ಯಾಂಗ್ ಆಗ್ತಿತ್ತು. ನಾನು ಅರ್ಧ ಕೆಲ್ಸ ಮಾಡೋದು ಸೇವ್ ಮಾಡೋಕಾಗ್ತಿರ್ಲಿಲ್ಲ. ಮತ್ತೆ ಹ್ಯಾಂಗ್– ಹೀಗೆ ಆರೇಳು ಬಾರಿ ಆಯ್ತು. ಹಳೇ ಟ್ರಾನ್ಸಿಸ್ಟರ್‌ಗಳು ಸರಿಯಾಗಿ ಕೆಲಸ ಮಾಡದಿದ್ರೆ ಆಚೀಚೆ ತಟ್ಟಿ, ತಲೆ ಮೇಲೆ ಕುಟ್ಟಿ, ಹಾಡು ಕೇಳಿ ಅಭ್ಯಾಸವಿದ್ದ ನಾನು ಟೇಬಲ್ ಅಡಿಯಿದ್ದ ಸಿಪಿಯುಗೆ ಮೆತ್ತಗೆ ಒದ್ದೆ. ಮಾನಿಟರ್‌ನಲ್ಲಿ ಚಿತ್ರವಿಚಿತ್ರ ಚಿತ್ರಗಳು ಬಂದು ಕುಯ್ ಎಂದು ಶಬ್ದ ಮಾಡಿ ಒಂದೇ ಸಲ ಆಫ್ ಆಯ್ತು.'



'ಥೂ ಶನಿ, ನಿನ್ನ ಮೂತಿಗೆ, ಕಂಪ್ಯೂಟರ್ ತಗೋ ಅಂತ ಬೇರೆ ಹೇಳಿದ್ನಲ್ಲ! ದನ ಕಾಯೋಕೋಗು ಗಮಾರ. ತಿಕದ್‌ಮೇಲೆ ನಾಕು ಒದೀಬೇಕು ನೋಡು ನಿನಗೆ. ಏನಾದ್ರೂ ಮಾಡ್ಕೊಂಡು ಸಾಯಿ, ನನಗೆ ಬೇರೆ ಕೆಲ್ಸ ಇದೆ' ಎಂದವರೇ ಎಲ್ಲಾ ಬಿಸಾಕಿ ಅವರ ಕಂಪ್ಯೂಟರ್ ಮುಂದೆ ಕುಳಿತು ಅರ್ಧಕ್ಕೆ ನಿಲ್ಲಿಸಿದ್ದ ಕೆಲ್ಸ ಮುಂದುವರೆಸಿದರು.

ನಾನು ತಿಕ ಸುಟ್ಟ ಬೆಕ್ಕಿನಂತೆ ಪ್ಯಾಕ್ ಮಾಡಲು ಶುರು ಮಾಡಿದೆ. ವಾರೆಗಣ್ಣಿನಲ್ಲಿ ನನ್ನನ್ನೇ ನೋಡ್ತಾ ಇದ್ದಿದ್ದು ನನ್ನ ಗಮನಕ್ಕೆ ಬರ್ತಾ ಇತ್ತು. ಇನ್ನೇನು ಮಣ್ಣು ತಿನ್ನೋ ಕೆಲ್ಸ ಮಾಡ್ಕೊಂಡಿದ್ದೇನೆ. ಜೊತೆಗೆ ಇವರ ಅಮೂಲ್ಯ ಸಮಯ ಬೇರೆ ಹಾಳ್ಮಾಡಿದೀನಿ. 'ಹೊರಡ್ತೀನಿ' ಎಂದವನೇ ಮಹಡಿ ಮೆಟ್ಟಿಲಿಳಿಯತೊಡಗಿದೆ. 'ಏ ಧನಂಜಯ ಬಾ ಇಲ್ಲಿ' ಎಂದು ವಾಪಸ್ ಕರೆದರು. 'ಆ ಟೇಬಲ್ ಮೇಲೆ ಎಲ್ಲಾ ಬಿಡಿಸಿಡು. ಅದ್ಯಾಕಾಗಲ್ಲ ನೋಡೇ ಬಿಡೋಣ' ಅಂದರು! ಅವರು ಈ ಹಿಂದೆ ಉಪಯೋಗಿಸುತ್ತಿದ್ದ ಕಂಪ್ಯೂಟರ್‌ಗಳ ಸ್ಪೇರ್‌ಪಾರ್ಟ್ಸ್‌ಗಳನ್ನು ತಂದು ಚುಚ್ಚಿ, ಕಿತ್ತು ಬದಲಿಸಿ ಹಾಗೂ ಹೀಗೂ ಮಾಡಿ ಸತ್ತಿದ್ದ ಕಂಪ್ಯೂಟರ್ ಕಣ್ಬಿಡುವಂತೆ ಮಾಡಿದರು.

'ಇನ್ನೊಂದ್ಸಲ ಇಂತಹ ಯಡವಟ್ಟನ್ನೇನಾದ್ರೂ ಮಾಡ್ಕೊಂಡ್ರೆ ಗ್ರಾಚಾರ ಬಿಡಿಸ್ತೀನಿ. ನಾಳೆ ಭಾನುವಾರ ಅಲ್ವಾ? ಚಾರ್ಮಾಡಿಗೆ ಹೋಗ್ಲಿಕ್ಕಿದೆ. ಹೊರಟು ಬೆಳಿಗ್ಗೆ ಏಳು ಗಂಟೆಗೆ ಇಲ್ಲಿಗ್ಬಾ. ಲ್ಯಾಂಡ್‌ಸ್ಕೇಪ್ ಫೋಟೋಗ್ರಫಿ ಮಾಡ್ಕೊಂಡು ಬರೋಣ' ಎಂದರು. ಎರಡು ವಾರದ ನಂತರ, ಸಿಪಿಯು ಅನ್ನು ಒದ್ದ ಕಾರಣವಾಗಿ ಕಂಪ್ಯೂಟರ್‌ನ ಮದರ್ ಬೋರ್ಡನ್ನೇ ಬದಲಾಯಿಸುವ ಮೇಜರ್ ಸರ್ಜರಿಯನ್ನೇ ಮಾಡಿಸಬೇಕಾಗಿ ಬಂತು. ಮತ್ತೆಲ್ಲಿ ಮಂಗಳಾರತಿ ಮಾಡ್ತಾರೋ ಎಂದು ಅವರಿಗೆ ಅದನ್ನು ಹೇಳಲೇ ಇಲ್ಲ! ಕಲಿಯುವ ಉತ್ಸಾಹವಿರುವಾಗ ತೇಜಸ್ವಿಯವರು ಯಾವುದೇ ಕ್ಲಿಷ್ಟ ವಿಚಾರಗಳನ್ನು ಅತ್ಯಂತ ಸಮರ್ಪಕವಾಗಿ, ಅರ್ಥಪೂರ್ಣವಾಗಿ ಮತ್ತು ಸರಳವಾಗಿ ವಿವರಿಸುತ್ತಿದ್ದರು. ಕಂಪ್ಯೂಟರ್, ಫೋಟೋಗ್ರಫಿ ಗ್ರಾಫಿಕ್ ಕಲೆಗಳ ಬಗ್ಗೆ ಏನೇನೂ ತಲೆ ಬುಡ ತಿಳಿಯದಿದ್ದ ನನಗೆ ಈಗೇನಾದ್ರೂ ಅಲ್ಪ ಸ್ವಲ್ಪ ತಿಳಿದಿದ್ದರೆ ಅದಕ್ಕೆ ತೇಜಸ್ವಿಯವರೇ ಕಾರಣ.

***

ಅವತ್ತು ಚಾರ್ಮಾಡಿಯ ನಿರಭ್ರ ಪರಿಸರದಲ್ಲಿ ಫೋಟೋ ತೆಗೆಯುತ್ತಾ ಹೋದ ನಾವು ಉಜಿರೆಯಲ್ಲಿ ಐಸ್‌ಕ್ರೀಂ ತಿಂದದ್ದು ನನಗೆ ಈಗಲೂ ನೆನಪಿದೆ. ಕೆಲವರಿಗೆ ಶುಗರ್‌ಲೆಸ್ ಕಾಫಿಯಂತೆ, ತೇಜಸ್ವಿಯವರಿಗೆ ನಟ್‌ಲೆಸ್ ಗಡ್‌ಬಡ್! ಪಾರ್ಲರಿನಲ್ಲಿ ಕುಳಿತಿದ್ದ ತೇಜಸ್ವಿಯವರನ್ನು ಕಾಲೇಜು ಹುಡುಗಿಯರ ದಂಡೊಂದು ಆದರಿಸಿದ್ದೇ ಆದರಿಸಿದ್ದು. ಬಂದ ದಾರಿಯಲ್ಲಿ ಹಿಂದಿರುಗದ ನಾವು ಶಿರಾಡಿ ಹಾದಿಯಲ್ಲಿ ಬಂದದ್ದು ಒಂದು ವಿಶಿಷ್ಟ ಅನುಭವ. ನನ್ನ ಸ್ಕೂಟರಿನಲ್ಲೇ ತೆರಳಿದ್ದೆವು. ಸ್ವಲ್ಪ ದೂರ ನಾನು, ಸ್ವಲ್ಪ ದೂರ ತೇಜಸ್ವಿಯವರು ಓಡಿಸುತ್ತಿದ್ದೆವು. ಸುಬ್ರಹ್ಮಣ್ಯ ರಸ್ತೆಯಾದ್ದರಿಂದ ಅಲ್ಲಲ್ಲಿ ಪ್ರವಾಸಿಗರು ಎದುರಾಗುತ್ತಿದ್ದರು. ಕೆಲವರು ತೇಜಸ್ವಿಯವರನ್ನು ಗುರುತಿಸಿ ಸಂತಸ ಪಡುತ್ತಿದ್ದರು.

'ನೋಡು, ನಾವೀಗ ರಸ್ತೆ ಬದಿಯಲ್ಲಿ ಯಾರೋ ಎಂಬಂತೆ ಇರೋಣ, ಯಾರು ಗುರುತಿಸ್ತಾರೆ ನೋಡೋಣ. ನನಗೂ ಈ ಬಿಸಿಲಿಗೆ ಆಯಾಸ ಆಗಿದೆ. ವಿಶ್ರಾಂತಿ ತೆಗೆದುಕೊಳ್ಳೋಣ' ಎಂದವರೇ ರಸ್ತೆ ಬದಿಯ ನೆಡುತೋಪಿನ ಮರದ ನೆರಳಿನಲ್ಲಿ ರಸ್ತೆ ಪಕ್ಕದಲ್ಲಿಯೇ ತರಗೆಲೆಗಳ ಮೇಲೆ ಮಲಗಿಯೇಬಿಡೋದೆ!

'ಛೇ, ಇಂತಹ ಮನುಷ್ಯ ಹೀಗೆ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಬೇಕಾಬಿಟ್ಟಿ ಮಲಗುವುದೇ' ಎಂದು ನನಗೆ ಕೆಡುಕೆನಿಸಿತು. 'ಸರ್ ಇದೇನು ಹೀಗೆ?' ಎಂದುದಕ್ಕೆ, 'ನೀನೂ ಬೇಕಾದ್ರೆ ಮಲ್ಕೊಳಯ್ಯ. ಇನ್ನೂ ಸುಮಾರ್ ದೂರ ಹೋಗ್ಲಿಕ್ಕಿದೆ. ಸ್ಟೇಟಸ್ ಮೇಂಟೇನ್ ಮಾಡ್ತೀನಿ ಅಂದ್ರೆ ಇಲ್ಲಿಯ ಸೆಕೆ, ಬಿಸಿಲಿಗೆ ಸತ್ತೋಗ್ಬೇಕಾಗುತ್ತೆ.. ಅಷ್ಟೇ' ಎಂದವರೇ ಅರ್ಧ ಗಂಟೆಗೂ ಮೀರಿ ಸಂತೃಪ್ತ ನಿದ್ದೆಯೊಂದನ್ನು ತೆಗೆದಿದ್ದರು.

**(ಮುಂದಿನ ವಾರ: ದೈತ್ಯಾಕಾರದ ಟ್ಯಾಂಕರ್ ಮುಂದೆ ಮಕಾಡೆ ಬಿದ್ದ ಸ್ಕೂಟರ್!)**



www.tejaswivismaya.com